## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.568/2016
ಸಿಡಬ್ಲ್ಯೂ. 2 ಪಿಡಬ್ಲ್ಯೂ2

| | | |
|---|---|---|
| ಸಾಕ್ಷಿಯ ಹೆಸರು | - | ಮಹಮ್ಮದ ಇಲಿಯಾಸ ಹಸನಸಾಬ ತಳವಾರ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಶೇತ್ಕಿ |
| ವಾಸ | - | ಮಕ್ಕಳಗೇರಿ |

ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಿದ್ದು ಅವು ಇನಕ್ವೆಸ್ಟ ಪಂಚನಾಮೆ ಮತ್ತು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಮತ್ತು ಅಪರಾಧ ಸ್ಥಳದ ಕಚ್ಚಾನಕಾಶೆಗಳಾಗಿದ್ದು, ಅವುಗಳಲ್ಲಿರುವ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ಇನಕ್ವೆಸ್ಟ ಪಂಚನಾಮೆಯನ್ನು ಈಗಾಗಲೇ ನಿಪಿ-3 ಅಂತಾ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಅಂತಾ, ಪಂಚನಾಮೆಯನ್ನು ನಿಪಿ-6 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ 6(ಎ) , ಕಚ್ಚಾ ನಕಾಶೆಯನ್ನು ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಮೃತ ಇಮಾಮಬೂ ಹೂಲಿಕಟ್ಟಿ ಅವರ ಶವದ ಪಂಚನಾಮೆಯನ್ನು ನಿಪಿ-3 ರ ಪ್ರಕಾರ ಜರುಗಿಸಿರುತ್ತಾರೆ. ಶವದ ಪಂಚನಾಮೆ ಕಾಲಕ್ಕೆ ತೆಗೆದ ಫೊಟೋಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿಪಿ-8 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಘಟನಾ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ, ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ, ನಿಪಿ-6 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸುಮಾರು 7 ವರ್ಷಗಳ ಹಿಂದೆ ನಾನು ಮಕ್ಕಳಗೇರಿ ಗ್ರಾಮದಲ್ಲಿದ್ದಾಗ ಪೊಲೀಸರು ಬಿಳಿ ಹಾಳೆಯ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ

ದಿಃ 25-11-2015 ರಂದು ಗೋಕಾಕ ಗ್ರಾಮೀಣ ಪೊಲೀಸರು ನನ್ನನ್ನು ಪಂಚರನ್ನಾಗಿ ಮಕ್ಕಳಗೇರಿ ಗ್ರಾಮದ ಹದ್ದಿಯ ಮಕ್ಕಳಗೇರಿ ಪುಡಕಲಕಟ್ಟಿ ಡಾಂಬರ ರಸ್ತೆಯ ಮೇಲೆ ಕರೆಯಿಸಿ ಚಾಸಾ-6 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನನ್ನ ಸಮಕ್ಷಮ ಮುಂಜಾನೆ 9-15 ರಿಂದ 10-15 ಗಂಟೆವರೆಗೆ ಜರುಗಿಸಿ

ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ಓದಿ ಹೇಳಿ ನಿಪಿ-6 ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಅದೇ ಸಮಯಕ್ಕೆ ಪೊಲೀಸರು ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ನಿಪಿ-7 ರ ಪ್ರಕಾರ ತೆಗೆದಿರುತ್ತಾರೆಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಒಪ್ಪಿಕೊಳ್ಳುತ್ತಾರೆ. ಫೊಟೋವನ್ನು ನಿಪಿ-9 ಎಂದು ಗುರುತಿಸಲಾಯಿತು. ನಿಪಿ-6 ರ ಪ್ರಕಾರ ಘಟನಾ ಸ್ಥಳದ ಪಂಚನಾಮೆ ಹಾಗೂ ನಿಪಿ-7 ರ ಪ್ರಕಾರ ಕಚ್ಚಾ ನಕಾಶೆ ತಯಾರಿಸಿದ್ದರೂ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ

ನಿಪಿ-9 ಫೊಟೋವನ್ನು ಏಕೆ ತೆಗೆಸಿದರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

ಸಿ.ಸಿ. ನಂ.568/2016
ಸಿಡಬ್ಲ್ಯೂ. 3 ಪಿಡಬ್ಲ್ಯೂ3

| | | |
|---|---|---|
| ಸಾಕ್ಷಿಯ ಹೆಸರು | - | ರಮಜಾನ ಜಮಾಲಸಾಬ ಸನದಿ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ಶೇತ್ಕಿ |
| ವಾಸ | - | ಮಕ್ಕಳಗೇರಿ |

ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಿದ್ದು ಅವು ಇನಕ್ವೆಸ್ಟ ಪಂಚನಾಮೆ ಮತ್ತು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಮತ್ತು ಅಪರಾಧ ಸ್ಥಳದ ಕಚ್ಚಾನಕಾಶೆಗಳಾಗಿದ್ದು, ಅವುಗಳಲ್ಲಿರುವ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ಇನಕ್ವೆಸ್ಟ ಪಂಚನಾಮೆಯನ್ನು ಈಗಾಗಲೇ ನಿಪಿ-3 ಅಂತಾ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಅಂತಾ, ಅಪರಾಧ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿಪಿ-6 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ 6(ಬಿ) , ಕಚ್ಚಾನಕಾಶೆಯನ್ನು ಈಗಾಗಲೇ ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ 7(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಮೃತ ಇಮಾಮಬೂ ಹೂಲಿಕಟ್ಟಿ ಅವರ ಶವದ ಪಂಚನಾಮೆಯನ್ನು ನಿಪಿ-3 ರ ಪ್ರಕಾರ ಜರುಗಿಸಿರುತ್ತಾರೆ. ಶವದ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಘಟನಾ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ, ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ, ನಿಪಿ-6 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಸುಮಾರು 7 ವರ್ಷಗಳ ಹಿಂದೆ ನಾನು ಮಕ್ಕಳಗೇರಿ ಗ್ರಾಮದಲ್ಲಿದ್ದಾಗ ಪೊಲೀಸರು ಬಿಳಿ ಹಾಳೆಯ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ

ದಿಃ 25-11-2015 ರಂದು ಗೋಕಾಕ ಗ್ರಾಮೀಣ ಪೊಲೀಸರು ನನ್ನನ್ನು ಪಂಚರನ್ನಾಗಿ ಮಕ್ಕಳಗೇರಿ ಗ್ರಾಮದ ಹದ್ದಿಯ ಮಕ್ಕಳಗೇರಿ ಪುಡಕಲಕಟ್ಟಿ ಡಾಂಬರ ರಸ್ತೆಯ ಮೇಲೆ ಕರೆಯಿಸಿ ಚಾಸಾ-6 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನನ್ನ ಸಮಕ್ಷಮ ಮುಂಜಾನೆ 9-15 ರಿಂದ 10-15 ಗಂಟೆವರೆಗೆ ಜರುಗಿಸಿ ಸ್ಥಳದಲ್ಲಿ ಪಂಚನಾಮೆಯನ್ನು ಬರೆದು ಓದಿ ಹೇಳಿ ನಿಪಿ-6 ಕ್ಕೆ ನನ್ನ ಸಹಿ ಪಡೆದಕೊಂಡಿರುತ್ತಾರೆಂದರೆ ಸರಿಯಲ್ಲ.

ಅದೇ ಸಮಯಕ್ಕೆ ಪೊಲೀಸರು ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ನಿಪಿ-7 ರ ಪ್ರಕಾರ ತೆಗೆದಿರುತ್ತಾರೆಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೋಟೊವನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಒಪ್ಪಿಕೊಳ್ಳುತ್ತಾರೆ. ಫೊಟೋವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ನಿಪಿ-6 ರ ಪ್ರಕಾರ ಘಟನಾ ಸ್ಥಳದ ಪಂಚನಾಮೆ ಹಾಗೂ ನಿಪಿ-7 ರ ಪ್ರಕಾರ ಕಚ್ಚಾ ನಕಾಶೆ ತಯಾರಿಸಿದ್ದರೂ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ

ನಿಪಿ-9 ಫೊಟೋವನ್ನು ಏಕೆ ತೆಗೆಸಿದರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.568/2016
ಸಿಡಬ್ಲ್ಯೂ. 5 ಪಿಡಬ್ಲ್ಯೂ.4

| | | |
|---|---|---|
| ಸಾಕ್ಷಿಯ ಹೆಸರು | - | ಅಶೋಕ ಯಲ್ಲಪ್ಪ ಕಾಗಲ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ಶೇತ್ಕಿ |
| ವಾಸ | - | ಮಕ್ಕಳಗೇರಿ |

ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನನಗೆ ಮೃತ ಇಮಾಮಬೂ ಹೂಲಿಕಟ್ಟಿ ಇವರ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇರುತ್ತದೆ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಹಾಗೂ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಯಾವ ವಾಹನದಿಂದ ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ , ಯಾವುದೇ ಹೇಳಿಕೆ ನೀಡಿರುವುದಿಲ್ಲ. ಪೊಲೀಸರು ನಾ ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಕಚ್ಚಾ ನಕಾಶೆಯನ್ನು ತಯಾರಿಸಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ಅದು ಘಟನಾ ಸ್ಥಳದ ಕಚ್ಚಾ ನಾಕಶೆ ಆಗಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ

ದಿಃ24-11-2015 ರಂದು ಮಧ್ಯಾಹ್ನ ನಾನು ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಸಂಜೆ 4-45 ಗಂಟೆ ಸುಮಾರಿಗೆ ನಮ್ಮೂರಿನ ಚಾಸಾ-7 ಮತ್ತು ಅವರ ಹೆಂಡತಿ ಇಮಾಮಬೂ ಹೂಲಿಕಟ್ಟಿ ಇವರು ರಸ್ತೆಯ ಎಡಬದಿಯಿಂದ ಮಕ್ಕಳಗೇರಿ ಕಡೆಯಿಂದ ಪುಡಕಲಕಟ್ಟಿ ಕಡೆಗೆ ನಡೆಯುತ್ತಾ ಹೋಗುತ್ತಿದ್ದರು ಆ ಸಮಯದಲ್ಲಿ ಪುಡಕಲಕಟ್ಟಿ ಕಡೆಯಿಂದ ಒಬ್ಬ ಜೀಪ ಚಾಲಕನು ತನ್ನ ಗಾಡಿಯನ್ನು ಅತೀ ಜೂರಾಗಿ ನಿಷ್ಕಾಳಜಿತನನಿಂದ ಹಾಗೂ ದುಡುಕಿನಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸಿಕೊಂಡು ರಾಂಗ

ಸೈಡನಲ್ಲಿ ಬಂದು ಇಮಾಮಬೂ ಹೂಲಿಕಟ್ಟಿ ಇವಳಿಗೆ ಹಾಯಿಸಿ ಜೀಪನ್ನು ಪಲ್ಟಿ ಮಾಡಿ ಕೆಡವಿದನು. ನಾನು ಕೂಡಲೇ ಘಟನಾ ಸ್ಥಳಕ್ಕೆ ಹೋದಾಗ ಚಾಸಾ-6 ರವರೂ ಸಹ ಬಂದಿದ್ದರು. ಇಮಾಮಬೂ ಅವರ ತಲೆಗೆ ಹಣೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ಸ್ಥಳದಲ್ಲಿ ಮರಣ ಹೊಂದಿದರು, ಆರೋಪಿಗೂ ಸಹ ತಲೆ ಮೈಕೈಗೆ ಪೆಟ್ಟಾಗಿದ್ದು ಅಪಘಾತ ಪಡಿಸಿದ ಜೀಪ ಸಂಖ್ಯೆ ಕೆಎ-29,ಪಿ-5787 ಅಂತಾ ಇದ್ದು ನಂತರ 108 ಅಂಬುಲೆನ್ಸ ವಾಹನದಲ್ಲಿ ಗಾಯಾಳು ಇವರನ್ನು ಗೋಕಾಕಕ್ಕೆ ಕಳುಹಿಸಿ ಕೊಟ್ಟೆನು ನಂತರ ಚಾಸಾ-1 ರವರಿಗೆ ಬರಲು ತಿಳಿಸಿದೆನು, ನಂತರ ಚಾಸಾ-1 ರವರು ಬಂದ ನಂತರ ಅಪಘಾತದ ಸಂಗತಿಯನ್ನು ತಿಳಿಸಿದೆನು. ಚಾಸಾ-1 ರವರು ಜೀಪ ಚಾಲಕನ ವಿರುದ್ಧ ಪಿರ್ಯಾದಿಯನ್ನುಕೊಟ್ಟಿರುತ್ತಾರೆ, ಪಂಚನಾಮೆಕಾಲಕ್ಕೆ ಹಾಜರಿದ್ದು ಘಟನಾ ಸ್ಥಳವನ್ನು ತೋರಿಸಿರುತ್ತೆನೆಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದ ಹಾಗೆ ದಿಃ 24-11-2015 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-10 ಅಂತಾ ಗುರುತಿಸಲಾಯಿತು. ದಿಃ25-11-2015 ರಂದು ಪೊಲೀಸರು ಸ್ಥಳಕ್ಕೆ ಬಂದಾಗ ನಾ ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-6 ರ ಪ್ರಕಾರ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ನಿಪಿ-7 ರ ಪ್ರಕಾರ ಕಚ್ಚ ನಾಕಶೆಯನ್ನು ತಯಾರಿಸಿರುತ್ತಾರೆಂದರ ಸರಿಯಲ್ಲ. ಸಾಕ್ಷಿಗೆ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೊಟೊವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಒಪ್ಪುತ್ತಾರೆ ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದೆ. ನಿಪಿ-10 ರ ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಹಾಗೂ ನಿಪಿ-6 ಮತ್ತು 7 ರ ಪ್ರಕಾರ ಪಂಚನಾಮೆ ಮತ್ತು ಕಚ್ಚಾ ನಾಕಶೆಯನ್ನು ತಯಾರಿಸಿದ್ದರೂ ಸಹ ಆರೋಪಿಯೊಂದಿಗೆ ರಾಜಿ ಆಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>

ನಿಪಿ-9 ಫೊಟೋವನ್ನು ಏಕೆ ತೆಗೆಸಿದರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

**<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>**

ಸಿ.ಸಿ. ನಂ.568/2016
ಸಿಡಬ್ಲ್ಯೂ. 6 ಪಿಡಬ್ಲ್ಯೂ.5

| | | |
|---|---|---|
| ಸಾಕ್ಷಿಯ ಹೆಸರು | - | ಬಸಪ್ಪ ರಾಮಪ್ಪ ದುರದುಂಡಿ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಶೇತ್ಕಿ |
| ವಾಸ | - | ಮಕ್ಕಳಗೇರಿ |

<u>ದಿನಾಂಕಃ 13-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ</u>

ನನಗೆ ಮೃತ ಇಮಾಮಬೂ ಹೂಲಿಕಟ್ಟಿ ಇವರ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇರುತ್ತದೆ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಹಾಗೂ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಯಾವ ವಾಹನದಿಂದ ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ ವಾಹನವನ್ನು ಯಾರು ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ</u>

ದಿಃ24-11-2015 ರಂದು ಸಂಜೆ ನಾನು ನಮ್ಮ ಊರಿನಿಂದ ಪುಡಕಲಕಟ್ಟಿ ಗ್ರಾಮಕ್ಕೆ ಖಾಸಗಿ ಕೆಲಸದ ಸಲುವಾಗಿ ಸಾಯಿಕಲ ಮೇಲೆ ಹೊರಟಿದ್ದೆನು, ಚಾಸಾ-1 ಇವರು ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಸಂಜೆ 4-45 ಗಂಟೆ ಸುಮಾರಿಗೆ ನಮ್ಮೂರಿನ ಚಾಸಾ-7 ಮತ್ತು ಅವರ ಹೆಂಡತಿ ಇಮಾಮಬೂ ಹೂಲಿಕಟ್ಟಿ ಇವರು ರಸ್ತೆಯ ಎಡಬದಿಯಿಂದ ಮಕ್ಕಳಗೇರಿ ಕಡೆಯಿಂದ ಪುಡಕಲಕಟ್ಟಿ ಕಡೆಗೆ ನಡೆಯುತ್ತಾ ಹೋಗುತ್ತಿದ್ದರು ಆ ಸಮಯದಲ್ಲಿ ಪುಡಕಲಕಟ್ಟಿ ಕಡೆಯಿಂದ ಒಬ್ಬ ಜೀಪ ಚಾಲಕನು ತನ್ನ ಗಾಡಿಯನ್ನು ಅತೀ ಜೂರಾಗಿ ನಿಷ್ಕಾಳಜಿತನನಿಂದ ಹಾಗೂ ದುಡುಕಿನಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಿಂದ ನಡೆಸಿಕೊಂಡು ರಾಂಗ ಸೈಡನಲ್ಲಿ ಬಂದು ಇಮಾಮಬೂ ಹೂಲಿಕಟ್ಟಿ ಇವಳಿಗೆ ಹಾಯಿಸಿ ಜೀಪನ್ನು ಪಲ್ಟಿ ಮಾಡಿ ಕೆಡವಿದನು. ನಾನು

ಕೂಡಲೇ ಘಟನಾ ಸ್ಥಳಕ್ಕೆ ಹೋದಾಗ ಚಾಸಾ-5 ರವರೂ ಸಹ ಬಂದಿದ್ದರು. ಇಮಾಮಬೂ ಅವರ ತಲೆಗೆ ಹಣೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ಸ್ಥಳದಲ್ಲಿ ಮರಣ ಹೊಂದಿದರು, ಆರೋಪಿಗೂ ಸಹ ತಲೆ ಮೈಕೈಗೆ ಪೆಟ್ಟಾಗಿದ್ದು ಅಪಘಾತ ಪಡಿಸಿದ ಜೀಪ ಸಂಖ್ಯೆ ಕೆಎ-29,ಪಿ-5787 ಅಂತಾ ಇದ್ದು ನಂತರ ಚಾಸಾ-6 ರವರು 108 ಅಂಬುಲೆನ್ಸ ವಾಹನದಲ್ಲಿ ಗಾಯಾಳು ಇವರನ್ನು ಗೋಕಾಕಕ್ಕೆ ಕಳುಹಿಸಿ ಕೊಟ್ಟರು ನಂತರ ಚಾಸಾ-6 ರವರು ಸದರಿ ಸಂಗತಿಯನ್ನು ಚಾಸಾ-1 ರವರಿಗೆ ಫೋನ ಮಾಡಿ ತಿಳಿಸಿದೆನು, ನಂತರ ಚಾಸಾ-1 ರವರು ಬಂದಾಗ ನಂತರ ಚಾಸಾ-6 ರವರು ಅಪಘಾತದ ಸಂಗತಿಯನ್ನು ತಿಳಿಸಿದರು. ಚಾಸಾ-1 ರವರು ಜೀಪ ಚಾಲಕನ ವಿರುದ್ಧ ಪಿರ್ಯಾದಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೆನೆ ಎಂದರೆ ಸರಿಯಲ್ಲ.

ಈ ಮೇಲೆ ಹೇಳಿದ ಹಾಗೆ ದಿಃ 24-11-2015 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-11 ಅಂತಾ ಗುರುತಿಸಲಾಯಿತು. ನಿಪಿ-11 ರ ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಯೊಂದಿಗೆ ರಾಜಿ ಆಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>

ನಿಪಿ-9 ಫೊಟೋವನ್ನು ಏಕೆ ತೆಗೆಸಿದರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.